<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು</u>
<u>ಸಿ.ಸಿ.ನಂ.**51/2015.**</u>

ದಿನಾಂಕಃ**14-11-2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | ಸಂತೋಷ್ | ಚಾಸಾ -17<br>ಪ್ರಾಸಾ -13 |
| ತಂದೆಯ ಹೆಸರು | ಸುಬ್ಬಣ್ಣಶೆಟ್ಟಿ | |
| ವಯಸ್ಸು (ವರ್ಷಗಳಲ್ಲಿ) | 42 | |
| ಉದ್ಯೋಗ | ವೃತ್ತ ನಿರೀಕ್ಷಕರು, ಸಾಗಾರ ಗ್ರಾಮಾಂತರ ವರ್ಗ, ಸಾಗರ. | |
| ವಾಸ | ಸಾಗರ. | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>

ನಾನು 2012 ರಿಂದ 2014 ರಲ್ಲಿ ಕಡೂರು ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ13.09.2012 ರಂದು ಈ ಕೇಸಿನ ಕಡತವನ್ನು ಶಿವಲಿಂಗಯ್ಯ ಪಿ ಎಸ್ ಐ ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರೆಸಿ, ದಿಃ20.09.2012 ರಂದು ಚಾಸಾ1 ರವರಿಗೆ ಈ ಕೇಸಿನ ದಾಖಲೆಗಳನ್ನು ಹಾಜರುಪಡಿಸುವಂತೆ ನೋಟೀಸು ಜಾರಿ ಮಾಡಿರುತ್ತೇನೆ.

ದಿಃ29.09.2012 ರಂದು ಅಧ್ಯಕ್ಷರು/ಕಾರ್ಯದರ್ಶಿ ಕಾರ್ನಟಕ ಹೌಸಿಂಗ್ ಫೆಡರೆಷನ್ ರವರಿಗೆ ಈ ಕೇಸಿಗೆ ಸಂಬಂಧಪಟ್ಟ ದಾಖಲೆ ನೀಡುವಂತೆ ನೋಟೀಸು ನೀಡಿರುತ್ತೇನೆ. ಸಾಕ್ಷಿಯು ಸದರಿ ನೋಟೀಸ್ ಅನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿ 34 ಎಂದು ಸಾಕ್ಷಿಯ ಸಹಿಯನ್ನು ನಿಪಿ-34(ಎ) ಎಂದು ಗುರುತಿಸಲಾಯಿತು.

ನಂತರ, ದಿಃ26.11.2012 ರಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮೆಸ್ ಕಾಂ ಕಡೂರು ಇವರಿಗೆ ಮೀಟರ್ ಬದಲಾವಣೆ ಮಾಡಲು ನೀಡಿದ ಅರ್ಜಿಯ ಪ್ರತಿಯನ್ನು ಹಾಜರುಪಡಿಸುವಂತೆ ಪತ್ರ ಬರೆದಿರುತ್ತೇನೆ.

ದಿಃ05.12.2012 ರಂದು ಚಾಸಾ 1 ರವರು ಠಾಣೆಗೆ ಹಾಜರಾಗಿ ಮಾದರಿ ಸಹಿ ನೀಡಲು ಒಪ್ಪಿದ್ದು, ಠಾಣೆಗೆ ಪಂಚರಾಗಿ ಚಾಸಾ 6, 7 ರವರನ್ನು ಬರಮಾಡಿಕೊಂಡು ಸದರಿಯವರ ಸಮಕ್ಷಮದಲ್ಲಿ ಚಾಸಾ 1 ರವರ ಮಾದರಿ ಸಹಿಗಳನ್ನು 6 ಬಿಳಿ ಹಾಳೆಗಳ ಮೇಲೆ ಪಡೆದುಕೊಂಡಿರುತ್ತೇನೆ ಹಾಗೂ ಮಹಜರ್ ಜರುಗಿಸಿರುತ್ತೇನೆ. ಆ ಹಾಳೆಗಳಿಗೆ QD 1 to 6 ಎಂದು ನಮೂದಿಸಿ ನನ್ನ ಸಹಿ ಮಾಡಿ ಪಂಚರ ಸಹಿಯನ್ನು ಸಹ ಪಡೆದಿರುತ್ತೇನೆ.

ನಂತರ ಅದನ್ನು ಒಂದು ಲಕೋಟೆಯಲ್ಲಿ ಹಾಕಿ ಸೀಲ್ ಮಾಡಿ ಪಿ ಎಂಬ ಅಕ್ಷರದ ಅರಗು ಸೀಲ್ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ಮಧ್ಯಾಹ್ನ 12.30 ರಿಂದ 1.15 ಗಂಟೆಯಲ್ಲಿ ಜರುಗಿಸಿರುತ್ತೇನೆ. ಸಾಕ್ಷಿಯು ಸದರಿ ಪಂಚನಾಮೆಯನ್ನು ಮತ್ತು ಸಹಿ ಪಡೆದ ದಾಖಲೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ 11 ರಿಂದ 17 ಗುರುತಿಸಲಾಗಿದ್ದು ಸಾಕ್ಷಿಯ ಸಹಿಗಳನ್ನು ನಿಪಿ 11 ಬಿ, 12 ಬಿ, 13 ಬಿ, 14 ಬಿ, 15 ಬಿ, 16 ಬಿ, 17 ಬಿ ಎಂದು ಗುರುತಿಸಲಾಯಿತು.

ದಿ:07.12.2012 ರಂದು ಕಡೂರಿನ ಮೆಸ್ ಕಾಂ ಗೆ ಬೇಟಿ ನೀಡಿದ್ದು, ಬಿ.ನಾಗರಾಜು-ರವರು ಪ್ರಕರಣಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಲು ಒಪ್ಪಿಕೊಂಡಿರುತ್ತಾರೆ. ಅದರಂತೆ ಅಲ್ಲಿಗೆ ಪಂಚರನ್ನಾಗಿ ಚಾಸಾ 5, 6 ರವರನ್ನು ಬರಮಾಡಿಕೊಂಡು ಸದರಿಯವರ ಸಮಕ್ಷಮ ಬಿ.ನಾಗರಾಜು ರವರು ಹಾಜರುಪಡಿಸಿದ ಚಾಸಾ 1 ರವರ ಅರ್ಜಿ, 2 ನೇ ಆರೋಪಿಯು ಮೀಟರ್ ಬದಲಾವಣೆಗೆ ನೀಡಿದ ಅರ್ಜಿಯನ್ನು ಮಹಜರ್ ಮೂಲಕ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಅವುಗಳಲ್ಲಿ 2 ನೇ ಆರೋಪಿ ನೀಡಿದ ಅರ್ಜಿಯನ್ನು ಕ್ರಮ ಸಂಖ್ಯೆ 1 ಎಂದು, ಚಾಸಾ 1 ರವರು ನೀಡಿದ ಅರ್ಜಿಯನ್ನು ಕ್ರಮ ಸಂಖ್ಯೆ 2 ಎಂದು ಗುರುತಿಸಿಕೊಂಡಿರುತ್ತೇನೆ. ಸಾಕ್ಷಿಯು ಈಗಾಗಲೇ ಗುರುತಿಸಿರುವ ನಿಪಿ 2, 3, 8 ರಲ್ಲಿನ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ 2 ಸಿ, 3 ಸಿ, 8 ಸಿ ಎಂದು ಗುರುತಿಸಲಾಯಿತು. ನಿಪಿ 8 ಮಹಜರ್ ಅನ್ನು ಮಧ್ಯಾಹ್ನ 1 ರಿಂದ 2 ಗಂಟೆಯಲ್ಲಿ ಜರುಗಿಸಿರುತ್ತೇನೆ ಹಾಗೂ ಸಾಕ್ಷಿದಾರರಾದ ಚಾಸಾ 2, 3 ಮತ್ತು ನಾಗರಾಜು ರವರ ಹೇಳಿಕೆ ದಾಖಲು ಮಾಡಿಕೊಂಡಿರುತ್ತೇನೆ. ನಂತರ ಅಮಾನತ್ತು ಪಡಿಸಿಕೊಂಡ ದಾಖಲೆಗಳನ್ನು ಠಾಣಾ ಸ್ವತ್ತು ಪಟ್ಟಿಯಲ್ಲಿ ನಮೂದು ಮಾಡಿ ತಜ್ಞರ ಪರೀಕ್ಷೆಗೆ ಕಳುಹಿಸಲು ನ್ಯಾಯಾಲಯದ ಆದೇಶ ಪಡೆದುಕೊಂಡಿರುತ್ತೇನೆ.

ದಿ:10.12.2012 ರಂದು ಚಾಸಾ 15 ರವರನ್ನು ಕರ್ನಾಟಕ ರಾಜ್ಯ ಹೌಸಿಂಗ್ ಕೋ-ಅಪರೇಟಿವ್ ಫೆಡರೇಶನ್ ತನಿಖೆಗೆಂದು ಕಳುಹಿಸಿಕೊಟ್ಟಿರುತ್ತೇನೆ.

ದಿ:24.12.2012 ರಂದು ಈ ಕೇಸಿನ ಆರೋಪಿ ಸಂಖ್ಯೆ 1 ಮತ್ತು 2 ರವರು ನಿರೀಕ್ಷಣಾ ಜಾಮೀನಿನ ಮೇಲೆ ಠಾಣೆಗೆ ಹಾಜರಾಗಿದ್ದು, ಅವರ ವಿರುದ್ಧ ದಸ್ತಗಿರಿ ಕ್ರಮ ಜರುಗಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಹಾಗೂ 1 ಮತ್ತು 2 ನೇ

ಆರೋಪಿತರು ಅವರ ಮಾದರಿ ಸಹಿ ಕೊಡುವುದಾಗಿ ಒಪ್ಪಿದ ಮೇರೆಗೆ ಠಾಣೆಗೆ ಪಂಚರನಾಗಿ ಚಾಸಾ 8, 9 ರವರನ್ನು ಬರಮಾಡಿಕೊಂಡು ಸದರಿಯವರ ಸಮಕ್ಷಮ 1 ನೇ ಆರೋಪಿಯಿಂದ 6 ಬಿಳಿ ಹಾಳೆಗಳ ಮೇಲೆ ಸಹಿ ಪಡೆದು ಸದರಿ ಹಾಳೆಗಳಿಗೆ Q 7 to 12 ಎಂದು ಸಂಖ್ಯೆ ನೀಡಿ ಗುರುತಿಸಿರುತ್ತೇನೆ ಹಾಗೂ ಅದೇ ರೀತಿ 2 ನೇ ಆರೋಪಿಯಿಂದ 6 ಬಿಳಿ ಹಾಳೆಗಳ ಮೇಲೆ ಸಹಿ ಪಡೆದು ಸದರಿ ಹಾಳೆಗಳಿಗೆ Q 13 to 18 ಎಂದು ಗುರುತಿಸಿರುತ್ತೇನೆ ಹಾಗೂ ಸದರಿ ಪ್ರಕ್ರಿಯೆಯನ್ನು ಮಹಜರ್ ಮೂಲಕವಾಗಿ ಜರುಗಿಸಿರುತ್ತೇನೆ. ಸಾಕ್ಷಿಯು ಸದರಿ ಮಹಜರ್ ಅನ್ನು ಮತ್ತು 1 ಮತ್ತು 2 ನೇ ಆರೋಪಿತರ ಮಾದರಿ ಸಹಿಗಳ ಹಾಳೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ 18 ಮತ್ತು 19 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ 18 ಸಿ ಮತ್ತು 19 ಸಿ ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು 1 ನೇ ಆರೋಪಿಯ ಸಹಿ ಎಂದರೆ ಅವರ ಕೈನಲ್ಲಿ ಮಲ್ಲಪ್ಪ ಎಂದು ಬಿಳಿ ಹಾಳೆಗಳಲ್ಲಿ ಬರೆಸಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನಂತರ ಸದರಿ ಮಾದರಿ ಕೈಬರಹ / ಸಹಿಯ ಪತ್ರಗಳನ್ನು ಒಂದು ಲಕೋಟೆಯಲ್ಲಿ ಹಾಕಿ ಪ್ಯಾಕ್ ಮಾಡಿ ಪಿ ಎಂಬ ಅಕ್ಷರದ ಅರಗು ಸೀಲ್ ಮಾಡಿರುತ್ತೇನೆ. ನಿಪಿ 18 ಮಹಜರ್ ಅನ್ನು ಸಂಜೆ 5.30 ರಿಂದ 6 ಗಂಟೆಯ ತನಕ ಬರೆದಿರುತ್ತೇನೆ.

ನಂತರ ಅಮಾನತ್ತು ಪಡಿಸಿಕೊಂಡ ನಿಪಿ 19 ರ ದಾಖಲೆಗಳನ್ನು ದಿಃ06.01.2013 ರಂದು ಚಾಸಾ 14 ರವರ ಮೂಲಕ ಕೋರಿಕೆ ಪತ್ರದೊಂದಿಗೆ ಬೆಂಗಳೂರಿನ ಎಫ್ ಎಸ್ ಎಲ್ ಕಛೇರಿಗೆ ಕಳುಹಿಸಿಕೊಟ್ಟಿರುತ್ತೇನೆ. ನಂತರ ಚಾಸಾ 14 ರವರು ದಾಖಲೆಗಳನ್ನು ಕೊಟ್ಟುಬಂದಿದ್ದಾಗಿ ನನ್ನ ಬಳಿ ವರದಿ ಮಾಡಿಕೊಂಡಿರುತ್ತಾರೆ.

ನಂತರ, ದಿಃ05.02.2013 ರಂದು ಮುಂದಿನ ತನಿಖೆಗೆಂದು ಕಡತವನ್ನು ಚಾಸಾ 18 ರವರಿಗೆ ಹಸ್ತಾಂತರಿಸಿರುತ್ತೇನೆ.

ದಿಃ24.07.2013 ರಂದು ಚಾಸಾ 18 ರವರಿಂದ ಪುನಾ ಕಡತವನ್ನು ತನಿಖೆಗೆಂದು ಪಡೆದುಕೊಂಡಿರುತ್ತೇನೆ. ನಂತರ ಎಫ್ ಎಸ್ ಎಲ್ ನಿಂದ ಚಾಸಾ 1 ರವರ ಸಹಿಗಳ ಬಗ್ಗೆ ಹೆಚ್ಚುವರಿ ದಾಖಲೆಗಳನ್ನು ನೀಡುವಂತೆ ಕೋರಿದ್ದ ಮೇರೆಗೆ ನಾನು ಚಾಸಾ 1 ರವರಿಗೆ ದಾಖಲೆ ಹಾಜರುಪಡಿಸುವಂತೆ ನೋಟೀಸು ನೀಡಿರುತ್ತೇನೆ. ದಿಃ23.10.2013 ರಂದು ಚಾಸಾ 1 ರವರ ಮಗನಾದ ಚಾಸಾ 4 ರವರು ಚಾಸಾ 1 ರವರ ಸಹಿಯುಳ್ಳ 1992-93 ನೇ

ಸಾಲಿನ ಜಮೀನು ವಿನಿಮಯ ಪತ್ರ ತಂದು ಹಾಜರುಪಡಿಸಿದ್ದು, ಅದನ್ನು ಪಂಚರನ್ನಾಗಿ ಚಾಸಾ 5, 12 ರವರನ್ನು ಠಾಣೆಗೆ ಬರಮಾಡಿಕೊಂಡು ಸದರಿಯವರ ಸಮಕ್ಷಮ ಮಹಜರ್ ಮೂಲಕವಾಗಿ ಬೆಳಿಗ್ಗೆ 10 ರಿಂದ 10.45 ಗಂಟೆಯಲ್ಲಿ ಅಮಾನತ್ತು ಪಡಿಸಿಕೊಂಡಿರುತ್ತೇನೆ. ನಂತರ ಚಾಸಾ 4 ರವರ ಹೇಳಿಕೆ ದಾಖಲು ಮಾಡಿಕೊಂಡಿರುತ್ತೇನೆ. ನಂತರ ವಶಪಡಿಸಿಕೊಂಡ ದಾಖಲೆಯನ್ನು ಠಾಣಾ ಮಾಲುಪಟ್ಟಿಯಲ್ಲಿ ನಮೂದು ಮಾಡಿ ನ್ಯಾಯಾಲಯದ ಆದೇಶ ಪಡೆದು ಎಫ್ ಎಸ್ ಎಲ್ ಕಳುಹಿಸಿರುತ್ತೇನೆ. ಸಾಕ್ಷಿಯು ಈಗಾಗಲೇ ಗುರುತಿಸಿದ ನಿಪಿ 6 ನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ 6 ಡಿ ಎಂದು ಗುರುತಿಸಲಾಯಿತು. ನಿಪಿ6 ರ ಕಾಲಕ್ಕೆ ಅಮಾನತ್ತು ಪಡಿಸಿಕೊಂಡ ನಿಪಿ 7 ರ ದಾಖಲೆಯನ್ನು ಸಾಕ್ಷಿಯು ನೋಡಿ ಗುರುತಿಸಿದರು.

ನಂತರ, ದಿಃ06.12.2013 ರಂದು ಅಮಾನತ್ತು ಪಡಿಸಿಕೊಂಡ ದಾಖಲೆಗಳನ್ನು ಎಫ್ ಎಸ್ ಎಲ್ ಕೋರಿಕೆ ಪತ್ರದೊಂದಿಗೆ ಕಳುಹಿಸಿಕೊಟ್ಟಿರುತ್ತೇನೆ. ದಿಃ08.12.2013 ರಂದು ಠಾಣಾ ಸಿಬ್ಬಂದಿಯಾದ ಓಂಕಾರಪ್ಪ ರವರು ದಾಖಲೆಗಳನ್ನು ಎಫ್ ಎಸ್ ಎಲ್ ಗೆ ಕೊಟ್ಟು ಬಂದ ಬಗ್ಗೆ ಹಿಂಬರಹವನ್ನು ನನಗೆ ನೀಡಿ ವರದಿ ಮಾಡಿಕೊಂಡಿರುತ್ತಾರೆ.

ನಂತರ, ಮುಂದಿನ ತನಿಖೆಗೆಂದು ಕಡತವನ್ನು ಚಾಸಾ18 ರವರಿಗೆ ಹಸ್ತಾಂತರಿಸಿರುತ್ತೇನೆ.

1 ಮತ್ತು 2 ನೇ ಆರೋಪಿತರನ್ನು ನೋಡಿದಲ್ಲಿ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ಮತ್ತು 2 ನೇ ಆರೋಪಿತರನ್ನು ನೋಡಿ ಗುರುತಿಸಿದರು.

ಈ ಹಂತದಲ್ಲಿ ಮಾನ್ಯ ಸ.ಸ.ಅ.ರವರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
ಪ್ರ. ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.